# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **789** |
| ಉತ್ತರಿಸಬೇಕಾದ ದಿನಾಂಕ | : | 23.02.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗ್ರಾಮೀಣ ಪ್ರದೇಶಗಳಲ್ಲಿ ನೀಡುವ ವಸತಿ ಯೋಜನೆಗಳು ಯಾವುವು;</td><td>ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಸತಿ ಸೌಕರ್ಯ ಕಲ್ಪಿಸಲು ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಾಜ್ಯ ಪುರಸ್ಕೃತ ಯೋಜನೆಗಳು:<br>1. ಬಸವ ವಸತಿ ಯೋಜನೆ<br>2. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ (ಗ್ರಾಮೀಣ)<br>3. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ)<br>ಕೇಂದ್ರ ಪುರಸ್ಕೃತ ಯೋಜನೆಗಳು:<br>1. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)</td></tr>
<tr><td>ಆ)</td><td>ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಫಲಾನುಭವಿಗೆ ನೀಡುವ ಅನುದಾನ ಎಷ್ಟು;</td><td>ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮನೆ ನಿರ್ಮಾಣಕ್ಕೆ ವಿವಿಧ ವಸತಿ ಯೋಜನೆಗಳಡಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಪ್ರತಿ ಮನೆಗೆ ಹಾಗೂ ವರ್ಗದವರಿಗೆ ಬಿಡುಗಡೆ ಮಾಡುತ್ತಿರುವ ಯೋಜನಾವಾರು ಸಹಾಯಧನದ ವಿವರ ಕೆಳಕಂಡಂತಿದೆ.<br><br>(ರೂ.ಲಕ್ಷಗಳಲ್ಲಿ)<br>
<table>
<tr><th rowspan="2">ಕ್ರ. ಸಂ</th><th rowspan="2">ಯೋಜನೆ</th><th colspan="2">ಗ್ರಾಮೀಣ</th></tr>
<tr><th>ಸಾಮಾನ್ಯ / ಅಲ್ಪ ಸಂಖ್ಯಾತರು</th><th>ಪ.ಜಾ/ ಪ. ಪಂಗಡ</th></tr>
<tr><td>1</td><td>ಬಸವ ವಸತಿ ಯೋಜನೆ (ಗ್ರಾಮೀಣ)</td><td>1.20</td><td>-</td></tr>
<tr><td>2</td><td>ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)</td><td>-</td><td>1.75</td></tr>
<tr><td>3</td><td>ದೇವರಾಜ್ ಅರಸು ವಸತಿ ಯೋಜನೆ (ಗ್ರಾಮೀಣ)</td><td>1.20</td><td>1.50</td></tr>
<tr><td>4</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)*</td><td>1.20</td><td>1.50</td></tr>
</table>
<br>** ಪ್ರಧಾನ ಮಂತ್ರಿ ಆವಾಸ್(ಗ್ರಾಮೀಣ) ಯೋಜನೆಯಡಿ 60:40 ಅನುಪಾತದಂತೆ ಕೇಂದ್ರ ಸರ್ಕಾರದಿಂದ ರೂ.72,000/-ಗಳನ್ನು ಒದಗಿಸಲಾಗುತ್ತಿದ್ದು, ಇನ್ನುಳಿದ ರೂ.48,000/-ಗಳನ್ನು ಹಾಗೂ ಪರಿಶಿಷ್ಟ ಜಾತಿ/ಪರಿಷ್ಟ ಪಂಗಡ ಫಲಾನುಭವಿಗಳಿಗೆ</td></tr>
</table>

| | | |
|---|---|---|
| | | ಹೆಚ್ಚುವರಿಯಾಗಿ ರೂ.30,000/-ಗಳನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುತ್ತಿದೆ. |
| ಇ) | ಇತ್ತೀಚಿಗೆ ಬೆಲೆ ಏರಿಕೆಯಿಂದ ನಿರ್ಮಾಣ ವೆಚ್ಚ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿವಿಧ ವಸತಿ ಯೋಜನೆಗಳಡಿ ನೀಡಲಾಗುತ್ತಿರುವ ಸಹಾಯಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಈ) | ಬಂದಿದ್ದಲ್ಲಿ, ಅನುದಾನದ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | |
| ಉ) | ಕಳೆದ 2 ವರ್ಷಗಳಿಂದ ಫಲಾನುಭವಿಗಳಿಗೆ ಹಂತವಾರು ಅನುದಾನ ಬಿಡುಗಡೆ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು) | 2019-20 ರಿಂದ ಈವರೆಗೆ ಸರ್ಕಾರದಿಂದ ರೂ.6,381.85 ಕೋಟಿಗಳು ಬಿಡುಗಡೆ ಮಾಡಿದ್ದು, ಈ ಪೈಕಿ ಭೌತಿಕ ಪ್ರಗತಿಗನುಗುಣವಾಗಿ ಬಿ.ಎಲ್.ಸಿ. ಮತ್ತು ಎ.ಹೆಚ್.ಪಿ. ಘಟಕ ಸೇರಿ ಒಟ್ಟಾರೆಯಾಗಿ ರೂ.6,304.25 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಪ್ರಸ್ತುತ ಅನುದಾನ ಕೊರತೆ ಇರುವುದಿಲ್ಲ. ಪ್ರತಿ ವಾರ ಭೌತಿಕ ಪ್ರಗತಿಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.<br><br>ವಿವಿಧ ಯೋಜನೆಗಳಡಿ ಅನುದಾನ ದುರ್ಬಳಕೆಯನ್ನು ತಡೆ ಹಿಡಿಯುವ ಉದ್ದೇಶದಿಂದ ಸರ್ಕಾರವು ಆದೇಶ ಸಂಖ್ಯೆ: ವಇ 154 ಹೆಚ್‌ಎಹೆಚ್ 2019, ದಿನಾಂಕ:16.11.2019 ರಲ್ಲಿ ಮನೆಗಳ ಪ್ರಗತಿಯನ್ನು ಜಿಯೋ ಆಧಾರಿತ "ವಿಜಿಲ್ ಆಪ್" ಮೂಲಕ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಪುನರ್ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಕ್ರಮ ವಹಿಸಲಾಗುತ್ತಿತ್ತು. ಆದರೆ, ಪ್ರಾರಂಭದಲ್ಲಿ ಸದರಿ ಪರಿಶೀಲಿನೆಗೆ 45 ದಿನಗಳಿಂದಾಗಿ ವಿಳಂಬವಾಗುತ್ತಿತ್ತು.<br><br>ಮನೆಗಳ ಪ್ರಗತಿಯನ್ನು ಜಿಯೋ ಆಧಾರಿತ "ವಿಜಿಲ್ ಆಪ್" ಮೂಲಕ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಪುನರ್ ಪರಿಶೀಲನೆಯು ವಿಳಂಬವಾಗುತ್ತಿರುವುದನ್ನು ಸರ್ಕಾರವು ಮನಗಂಡು ಆದೇಶ ಸಂಖ್ಯೆ:ವಇ 75 ಹೆಚ್‌ಎಹೆಚ್ 2021, ದಿನಾಂಕ:07.09.2021 ರಲ್ಲಿ ವಿಜಿಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಪ್ರತ್ಯೇಕವಾಗಿ ಪರಿಶೀಲಿಸುವುದನ್ನು ಮತ್ತಷ್ಟು ಸರಳೀಕರಿಸಿ In-House ಮೂಲಕ ಅಭಿವೃದ್ಧಿಪಡಿಸಿರುವ "Indira-Vigil" ವೆಬ್ ಆ್ಯಪ್ ಮೂಲಕ ಪರಿಶೀಲಿಸಿದ ನಂತರ ಅನುದಾನ ಬಿಡುಗಡೆಗೆ ಅನುಮತಿ ನೀಡಿರುತ್ತದೆ. "Indira-Vigil" ವೆಬ್ ಆ್ಯಪ್ ಮೂಲಕ ತುರ್ತಾಗಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯಾಗುತ್ತಿದೆ.<br><br>ಫಲಾನುಭವಿಗಳ ಆಧಾರ ಜೋಡಣೆಯಾಗಿಯೂ ಅನುದಾನವು 3 ಸಲ ಬ್ಯಾಂಕಿಗೆ ಜಮೆಯಾಗಿದೇ ಹಿಂದುರುಗಿರುವ ಪ್ರಕರಣಗಳಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆಯ ಆಧಾರ ಮೇಲೆ ಪಾವತಿಸುವ ಸಂಬಂಧ ಹೊಸದಾದ ಸಾಫ್ಟ್ ವೇರ್ ನ್ನು ತಯಾರಿಸಲು ಕ್ರಮ ವಹಿಸಲಾಗುತ್ತಿದೆ. |

ಅದರಂತೆ ವಿವಿಧ ವಸತಿ ಯೋಜನೆಗಳಡಿ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ಯಾವುದೇ ವಿಳಂಬವಾಗದಂತೆ ಫಲಾನುಭವಿಗಳ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡಣೆಗೊಂಡ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಪ್ರಸ್ತುತ ಬಾಕಿ ಇರುವುದಿಲ್ಲ.

ಸರ್ಕಾರವು ಕಳೆದ 2 ವರ್ಷಗಳಿಂದ ಈವರೆಗೆ ರೂ.6,381.85 ಕೋಟಿಗಳು ಬಿಡುಗಡೆ ಮಾಡಿದ್ದು, ಈ ಪೈಕಿ ಭೌತಿಕ ಪ್ರಗತಿಗನುಗುಣವಾಗಿ ಬಿ.ಎಲ್.ಸಿ. ಘಟಕದಡಿ ವಸತಿ ಯೋಜನೆಗಳಡಿ ಹಿಂದಿನ ಶ್ರೇಣಿಯನ್ನೊಳಗೊಂಡಂತೆ ಆಧಾರ ಜೋಡಣೆಯಾದ ಫಲಾನುಭವಿಗಳಿಗೆ ನೇರವಾಗಿ ರೂ.4247.07 ಕೋಟಿಗಳು ಹಾಗೂ ಎ.ಹೆಚ್.ಪಿ. ಘಟಕದಡಿ ರೂ.2057.18 ಕೋಟಿಗಳು ಒಟ್ಟಾರೆಯಾಗಿ ರೂ.6304.25 ಕೋಟಿಗಳನ್ನು ಖರ್ಚು ಮಾಡಲಾಗಿದ್ದು, ಯೋಜನಾವಾರು ಮತ್ತು ವರ್ಷವಾರು ವಿವರ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಯೋಜನೆಗಳು | 2019-20 | 2020-21 | 2021-22 ಜನವರಿ ಅಂತ್ಯಕ್ಕೆ) | ಒಟ್ಟು |
|---|---|---|---|---|---|
| 1 | ಬಸವ ವಸತಿ ಯೋಜನೆ (ಗ್ರಾಮೀಣ) | 799.70 | 614.65 | 390.87 | 1805.22 |
| 2 | ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ | 753.83 | 693.80 | 430.51 | 1878.14 |
| 3 | ದೇವರಾಜ್ ಅರಸು ವಸತಿ ಯೋಜನೆ | 44.36 | 44.70 | 62.98 | 152.04 |
| 4 | ವಾಜಪೇಯಿ ನಗರ ವಸತಿ ಯೋಜನೆ | 307.67 | 269.21 | 123.51 | 700.39 |
| | **ರಾಜ್ಯ ಒಟ್ಟು** | **1905.56** | **1622.36** | **1007.87** | **4535.79** |
| 5 | ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) | 158.62 | 95.53 | 94.20 | 348.35 |
| 6 | ಪ್ರಧಾನ ಮಂತ್ರಿ ಆವಾಸ್ ಯೋಜನೆ | 325.07 | 325.69 | 761.58 | 1412.34 |

| | | | | | | | |
|---|---|---|---|---|---|---|---|
| | | | (ನಗರ) | | | | |
| | | 7 | ರಾಜೀವ ಆವಾಸ್ ಯೋಜನೆ | 2.75 | 2.51 | 2.51 | 7.77 |
| | | | **ಕೇಂದ್ರ ಒಟ್ಟು** | **486.44** | **423.73** | **858.29** | **1768.46** |
| | | | **ಒಟ್ಟು** | **2392.00** | **2046.09** | **1866.16** | **6304.25** |

ಸಂಖ್ಯೆ :ವಇ 68 ಹೆಚ್‌ಎಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು